ಹಾಕುವುವವರು ಇಲ್ಲವೇ? ಇದ್ದೇ ಇದ್ದಾರೆ. ಪಕ್ಷ ಇಟ್ಟುಕೊಂಡು ನಾವು ಮಾಡುವುದಕ್ಕಾಗುವುದಿಲ್ಲ. ನಾವು ಚುನಾವಣೆ ಬಂದಾಗ ಪಕ್ಷ ರಾಜಕೀಯ ಮಾಡೋಣ. Definitely we will accept the challenge.

ಶ್ರೀ ಸಿ.ಟಿ. ರವಿ:ಅವರು ಹೇಳಿದ್ದು ಮರೆತು ಬಿಟ್ಟಿದ್ದಾರೆ. ನಾನು ಇಲ್ಲಿ ಹೇಳಿದ್ದು, ಅಲ್ಲಿ ಪೂಜಾರಪ್ಪನ ಪಾತ್ರ ಮಾಡುತ್ತಿರುವುದೇ ಜೆಡಿಎಸ್. ಮಾರಮ್ಮನಿಗೂ ಅವರೇ ಈ ಕಡೆ ಹನುಮಪ್ಪ ದೇವರಿಗೆ ಅವರೇ ಪೂಜಾರಪ್ಪ. ಎರಡೂ ಕಡೆ ಅವರೇ ಪೂಜಾರಪ್ಪ.

(ಗೊಂದಲ)

ಅಧ್ಯಕ್ಷರು: ಗೃಹ ಮಂತ್ರಿಗಳು ತಾವು ಇಲ್ಲಿ ಬನ್ನಿ. ಡಾಕ್ಟರೇ, 30 ನಿಮಿಷ ಆಯಿತು, ಇನ್ನು ಎಷ್ಟು ಹೊತ್ತು ಬೇಕು.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೇ ನಾಳೆ continue ಮಾಡುತ್ತೇನೆ. ಕೆಲವು Ministers ಇಲ್ಲ, specific, I don't criticize anybody. Specific advice to specific departments ಇದೆ. 15 ನಿಮಿಷ ಮಾತನಾಡುತ್ತೇನೆ. ಬೆಳಿಗ್ಗೆ ಎಲ್ಲಾ Ministers ಇರುತ್ತಾರೆ, One specific advice to each Minister ಅಷ್ಟೆ.

ಅಧ್ಯಕ್ಷರು: ನಾಳೆ ಬೆಳಿಗ್ಗೆ 15 ನಿಮಿಷ ಮಾತನಾಡಿ. ಇನ್ನೊಬ್ಬರಿಗೆ ಅವಕಾಶ ಕೊಡುತ್ತೇನೆ. ಈಗ ಪ್ರಶ್ನೋತ್ತರ.

4. ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಚಿಕ್ಕಬಳ್ಳಾಪುರ ನಗರದ ಕೊಳಚೆ ಪ್ರದೇಶಗಳ ಅಭಿವೃದ್ಧಿ

91(422) ಶ್ರೀ ಬಚ್ಚೇಗೌಡ ಕೆ.ಪಿ. (ಚಿಕ್ಕಬಳ್ಳಾಪುರ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ನಗರದಲ್ಲಿ 26 ಕೊಳಚೆ ಪ್ರದೇಶಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆಯವ್ಯಯದಲ್ಲಿ ಈ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ಒದಗಿಸಿರುವ ಅನುದಾನವೆಷ್ಟು;

ಇ) ಈ ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ಹಣ ಒದಗಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

ಈ) ಚಿಕ್ಕಬಳ್ಳಾಪುರ ನಗರದ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಯಾವ ಯಾವ ಯೋಜನೆಗಳನ್ನು ರೂಪಿಸಿದೆ;

ಉ) ಹಾಗಿಲ್ಲದಿದ್ದಲ್ಲಿ, ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸದೆ ಇರಲು ಸರ್ಕಾರಕ್ಕೆ ಇರುವ ಅಡ್ಡಿ ಅಂತಕಗಳೇನು?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು)

ಅ) ಹೌದು. ಈ 26 ಕೊಳಚೆ ಪ್ರದೇಶಗಳ ಪೈಕಿ 6 ಕೊಳಚೆ ಪ್ರದೇಶಗಳು ಮಂಡಳಿ ಕಾಯ್ದೆಯಡಿ ಘೋಷಣೆಯಾಗಿದ್ದು, ಉಳಿದ 20 ಕೊಳಚೆ ಪ್ರದೇಶಗಳು ಮಂಡಳಿ ಕಾಯ್ದೆಯಡಿಯಲ್ಲಿ ಘೋಷಣೆಗೆ ಗುಣ ಲಕ್ಷಣಗಳು ಹೊಂದಿಲ್ಲದ ಕಾರಣ ಇವುಗಳನ್ನು ಘೋಷಣೆ ಮಾಡುವ ಅವಶ್ಯಕತೆ ಇಲ್ಲವೆಂದು ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ. ಘೋಷಿತ 6 ಕೊಳಚೆ ಪ್ರದೇಶಗಳ ಹೆಸರು ಈ ಕೆಳಕಂಡಂತಿವೆ.

1) ವಾಪಸಂದ್ರ 2) ಚಾಮರಾಜಪೇಟೆ 3) ಕೋಟೆ ಏರಿಯಾ, ಬಾಪೂಜಿ ಎ.ಕೆ. ಮತ್ತು ಎ.ಡಿ. ಕಾಲೋನಿ 4) ದರ್ಗಾ ಮೊಹಲ್ಲಾ 5) ಕಂದಾವರ ಎ.ಕೆ. ಕಾಲೋನಿ 6) ಮುನ್ಸಿಪಲ್ ಕಾಲೇಜ್ ಎದುರು ಕೊಳಚೆ ಪ್ರದೇಶ

ಆ) ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದಿಂದ ಅನುದಾನ ಬಿಡುಗಡೆ ಆಗಿರುವುದಿಲ್ಲ.

ಇ) 2010–11ನೇ ಸಾಲಿನ ಆಯವ್ಯಯದಲ್ಲಿ ರಾಜ್ಯದಲ್ಲಿನ ಎಲ್ಲಾ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ರೂ. 50.00 ಲಕ್ಷಗಳನ್ನು ಒದಗಿಸಲಾಗಿತ್ತು. 2011–12ನೇ ಸಾಲಿನ ಆಯವ್ಯಯದಲ್ಲಿ 100 ಲಕ್ಷ ರೂ.ಗಳನ್ನು ಒದಗಿಸಲಾಗಿರುತ್ತದೆ. ಮುಂದಿನ ದಿನಗಳಲ್ಲಿ ಆದ್ಯತೆಯ ಮೇಲೆ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಾಗುವುದು.

ಈ) ಚಿಕ್ಕಬಳ್ಳಾಪುರ ಪಟ್ಟಣದಲ್ಲಿ ಹುಡ್ಕೋ ಯೋಜನೆಯಡಿಯಲ್ಲಿ ಬಾಪೂಜಿನಗರ ಪ್ರದೇಶದಲ್ಲಿ 64 ಮನೆಗಳನ್ನು ಹಾಗೂ ಚಾಮರಾಜಪೇಟೆ

ಪ್ರದೇಶದಲ್ಲಿ 122 ಮನೆಗಳನ್ನು 1989–90ನೇ ಸಾಲಿನಲ್ಲಿ ನಿರ್ಮಿಸಿ ಈ ಪ್ರದೇಶದ ನಿವಾಸಿಗಳಿಗೆ ಹಂಚಿಕೆ ಮಾಡಲಾಗಿರುತ್ತದೆ.

ಸಧ್ಯ ಯಾವ ಯೋಜನೆಗಳನ್ನು ರೂಪಿಸಿರುವುದಿಲ್ಲ. ಆದರೆ ಮುಂದಿನ 5 ವರ್ಷಗಳಲ್ಲಿ ದೇಶವನ್ನು ಕೊಳಚೆ ಪ್ರದೇಶ ಮುಕ್ತ ರಾಷ್ಟ್ರವನ್ನಾಗಿ ಮಾಡಲು ಕೇಂದ್ರ ಸರ್ಕಾರದ ನೂತನ ಯೋಜನೆ ರಾಜೀವ್ ಆವಾಜ್ ಯೋಜನೆಯು ಅನುಷ್ಠಾನಗೊಳ್ಳುತ್ತಿದ್ದು ಈ ಯೋಜನೆಯಡಿಯಲ್ಲಿ ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ಕೊಳಚೆ ಪ್ರದೇಶಗಳ ಸರ್ವೇಕ್ಷಣಾ ಕಾರ್ಯ ಪ್ರಗತಿಯಲ್ಲಿರುತ್ತದೆ.

ಉ) ಕೇಂದ್ರ ಸರ್ಕಾರದ ರಾಜೀವ್ ಆವಾಜ್ ಯೋಜನೆಯು ಕಾರ್ಯರೂಪಕ್ಕೆ ಬಂದ ನಂತರ, ಅನುದಾನ ಲಭ್ಯತೆ ಆಧರಿಸಿ, ಹಂತ ಹಂತವಾಗಿ ಕೊಳಚೆ ಪ್ರದೇಶಗಳ ಅಭಿವೃದ್ಧಿ ಕೈಗೊಳ್ಳಲು ಯೋಜಿಸಿರುವುದರಿಂದ ಯಾವ ಅಡ್ಡಿ ಆತಂಕಗಳು ಇರುವುದಿಲ್ಲ.

ಶ್ರೀ ಕೆ.ಪಿ. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಚಿಕ್ಕಬಳ್ಳಾಪುರ ನಗರದಲ್ಲಿ 26 ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿತ್ತು. ಅದರಲ್ಲಿ ಕೇವಲ 6 ಕೊಳಚೆ ಪ್ರದೇಶಗಳ ಗುಣಲಕ್ಷಣಗಳು ಹೊಂದಿದ್ದು ಉಳಿದವು ಗುಣಲಕ್ಷಣಗಳನ್ನು ಹೊಂದಿಲ್ಲವೆಂದು ಅವುಗಳನ್ನು ಕೈಬಿಟ್ಟಿದ್ದಾರೆ. ಜೊತೆಗೆ ಕೊಳಚೆ ಪ್ರದೇಶದ ಅಭಿವೃದ್ಧಿ ಕೈಗೊಳ್ಳುವುದಕ್ಕೆ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆ ಆಗಿರುವುದಿಲ್ಲವೆನ್ನುವ ಉತ್ತರವನ್ನು ಕೊಟ್ಟಿದ್ದಾರೆ. 2010–11ನೇ ಸಾಲಿಗೆ 50 ಲಕ್ಷ.ರೂ.ಗಳು ಮತ್ತು 2011–12ನೇ ಸಾಲಿನಲ್ಲಿ 100 ಲಕ್ಷ ರೂ.ಗಳನ್ನು ಈ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಇಟ್ಟಿದ್ದಾರೆ ಎನ್ನತಕ್ಕಂಥ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಮಾನ್ಯ ವಸತಿ ಸಚಿವರನ್ನು ನಾನು ಕೇಳಬಯಸುತ್ತೇನೆ. ಇಡೀ ರಾಜ್ಯದ ಕೊಳಚೆ ಪ್ರದೇಶಗಳಿಗೆ ಆಯವ್ಯಯದಲ್ಲಿ ಕೇವಲ 50 ಲಕ್ಷ ಮತ್ತು 100 ಲಕ್ಷ ರೂ.ಗಳನ್ನು ಮೀಸಲಿಡತಕ್ಕಂಥದ್ದು ಯಾವ ನ್ಯಾಯ. ಈಗಾಗಲೇ ಡಾ:ಸುಧಾಕರವರು ಮಾತನಾಡುವಂಥ ಸಂದರ್ಭದಲ್ಲಿ ಹೇಳಿದರು. ಮಾನ್ಯ ಮಂತ್ರಿಗಳ ಮತ್ತು ನ್ಯಾಯಾಧೀಶರುಗಳ ಬಂಗ್ಲೆಗೆ 150 ಕೋಟಿ ರೂ.ಗಳನ್ನು ಖರ್ಚು ಮಾಡಿ

ಕಟ್ಟತಕ್ಕಂಥ ಪರಿಸ್ಥಿತಿ ಇದೆ. ಇದು ಪ್ರಜಾಪ್ರಭುತ್ವದ ಒಂದು ದುರ್ದೈವ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ನೀವು ಉಪ ಪ್ರಶ್ನೆ ಕೇಳಿ, ಭಾಷಣವನ್ನು ಮಾಡಿದರೆ ಹೇಗೆ? ಭಾಷಣಕ್ಕೆ ಅವಕಾಶವಿಲ್ಲ. ಸಚಿವರು ಕೊಟ್ಟಿರುವ ಉತ್ತರದಲ್ಲಿ ಏನಾದರೂ ಕ್ಲಾರಿಫಿಕೇಶನ್ ಇದ್ದರೆ ಕೇಳಿ.

ಶ್ರೀ ಕೆ.ಪಿ.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಕೇವಲ 50 ಲಕ್ಷ ಮತ್ತು 100 ಲಕ್ಷ ರೂ. ಗಳನ್ನು ಕೊಟ್ಟರೆ ಈ ರಾಜ್ಯದ ಕೊಳಚೆ ಪ್ರದೇಶಗಳ ಅಭಿವೃದ್ಧಿ ಆಗುತ್ತದೆಯೆ? ಅವರು ಹಂದಿಗೂಡುಗಳಂಥ ಮನೆಗಳಲ್ಲಿ ವಾಸ ಮಾಡತಕ್ಕಂಥದ್ದು ಜೊತೆಗೆ 1989ನೇ ಸಾಲಿನಿಂದ ಈಚೆಗೆ ಚಿಕ್ಕಬಳ್ಳಾಪುರದಲ್ಲಿ ಯಾವುದೇ ಕೊಳಚೆ ಪ್ರದೇಶ ಅಭಿವೃದ್ಧಿ ಆಗಿಲ್ಲ. ಏಕೆ ಎನ್ನತಕ್ಕಂಥ ಮಾತನ್ನು ಕೇಳುತ್ತಾ, ಈಗ ಇದನ್ನು ಕೇಂದ್ರ ಸರ್ಕಾರದ ಕಡೆಗೆ ಕೈ ಮಾಡಿ ಬಿಟ್ಟಿದ್ದಾರೆ. 5 ವರ್ಷಗಳಲ್ಲಿ ದೇಶವನ್ನು ಕೊಳಚೆ ಮುಕ್ತ ದೇಶವನ್ನಾಗಿ ಮಾಡಲಿಕ್ಕೆ ಕೇಂದ್ರ ಸರ್ಕಾರ ರಾಜೀವ್ ಗಾಂಧಿ ಆವಾಜ್ ಯೋಜನೆಯನ್ನು ಜಾರಿಗೆ ತರುತ್ತದೆ, ಅದರಲ್ಲಿ ಇದನ್ನು ಅಭಿವೃದ್ಧಿ ಮಾಡುತ್ತೇವೆ ಎನ್ನತಕ್ಕಂಥದ್ದು ಇದನ್ನು ಬದಿಗಿಟ್ಟು ಕೂಡಲೇ ಈ ಕೊಳಚೆ ಪ್ರದೇಶಗಳಲ್ಲಿ ನಮ್ಮಂಥ ಮಾನವರು ಜೀವನ ಮಾಡುತ್ತಿದ್ದಾರೆ. ಪ್ರಾಣಿಗಳು ವಾಸ ಮಾಡುತ್ತಿಲ್ಲ. ಅವರ ಅಭಿವೃದ್ಧಿಗೆ ಸರ್ಕಾರ ಮುಂದಾಗಬೇಕು. ಶೀಘ್ರವಾಗಿ ಅವರಿಗೆ ವಸತಿ ಸೌಲಭ್ಯ ಮತ್ತು ಮೂಲಭೂತ ಸೌಲಭ್ಯವನ್ನು ಕಲ್ಪಿಸಲಿಕ್ಕೆ ಆಯವ್ಯಯದಲ್ಲಿ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಿ ಅವರ ಅಭಿವೃದ್ಧಿಗೆ ಸರ್ಕಾರ ಬರಬೇಕು ಎನ್ನತಕ್ಕಂಥ ಮಾತನ್ನು ತಮ್ಮ ಮೂಲಕ ನಾನು ಕೇಳಬಯಸುತ್ತೇನೆ.

ಶ್ರೀ ವಿ. ಸೋಮಣ್ಣ: ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ಬಚ್ಚೇಗೌಡರು ಕೇಳಿರುವಂಥದ್ದು ಚಿಕ್ಕಬಳ್ಳಾಪುರ ನಗರಸಭೆ ವ್ಯಾಪ್ತಿಯಲ್ಲಿ ಇರತಕ್ಕಂಥದ್ದು 26 ಕೊಳಚೆ ಪ್ರದೇಶಗಳು ಅದರಲ್ಲಿ ಅಧಿಕೃತವಾಗಿರತಕ್ಕಂಥದ್ದು 6 ಕೊಳಚೆ ಪ್ರದೇಶಗಳು. ಇನ್ನುಳಿದಿರತಕ್ಕಂಥ 20 ರಲ್ಲಿ 10 ಪ್ರದೇಶಗಳು ಖಾಸಗೀ ವ್ಯಕ್ತಿಗಳ ಜಮೀನುಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿರತಕ್ಕಂಥದ್ದು. 6 ಕೊಳಚೆ ಪ್ರದೇಶಗಳನ್ನು ಅಧಿಕೃತ ಎಂದು ಘೋಷಣೆ ಮಾಡಿರುವುದನ್ನು ಬಿಟ್ಟರೆ ಇನ್ನುಳಿದಿರತಕ್ಕಂಥ ಯಾವುದು ಕೊಳಚೆ ಪ್ರದೇಶ ಎನ್ನತಕ್ಕಂಥ ಘೋಷಣೆ

ಮಾಡದಿರುವುದು ನಿಜ. ಒಂದು ಮನೆಯಿಂದ ಮತ್ತೊಂದು ಮನೆಗೂ ಗುಡಿಸಲುಗಳು ಇರತಕ್ಕಂಥದ್ದಾಗಲಿ ಮತ್ತೊಂದು ಆಗಲಿ ನಾನು ಇದರ ಬಗ್ಗೆ ಎರಡು ಮೂರು ದಿವಸಗಳಿಂದ ಮಾಹಿತಿಯನ್ನು ತರಿಸಿ ಮಾನ್ಯ ಸದಸ್ಯರು ಹೇಳಿದ ಹಾಗೆ ಅಲ್ಲಿರುವ 6 ಕೊಳಚೆ ಪ್ರದೇಶಗಳಿಗೆ ಸುಮಾರು 1220 ಕುಟುಂಬಗಳು ವಾಸ ಮಾಡುತ್ತಿವೆ. ಅಲ್ಲಿ 7000 ಜನಸಂಖ್ಯೆ ಇದೆ. ಇನ್ನುಳಿದ 20 ರಲ್ಲಿ 24305 ಜನಸಂಖ್ಯೆ ವಾಸ ಮಾಡುತ್ತಿದ್ದಾರೆ. ಇವೆಲ್ಲವನ್ನು ಕ್ರೋಢೀಕರಿಸಿದಾಗ ಅಧಿಕೃತವಾದ 6 ಪ್ರದೇಶಗಳಿಗೆ ಇಲ್ಲಿಯವರೆಗೆ ಏನು ಮೂಲಭೂತ ಸೌಲಭ್ಯಗಳು ಅವರಿಗೆ ಒದಗಿಲ್ಲ, ಅದಕ್ಕೆ ಯಾವ ರೀತಿಯಾದ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೋ ಈ ಶಾಸನಸಭೆ ಆದ ಮೇಲೆ ನಾನೇ ಸ್ವತ: ಆ ಒಂದು ಪ್ರದೇಶಕ್ಕೆ ಭೇಟಿ ಕೊಡುತ್ತೇನೆ. ಒಂದು ಏನಾಗಿದೆ ಎಂದರೆ, 50 ಲಕ್ಷ ರೂ.ಗಳ ಬಗ್ಗೆ ಈ ಕೊಳಚೆ ಪ್ರದೇಶದ್ದು ಈ ಕೊಳಚೆ ನಿರ್ಮೂಲನ ಮಂಡಳಿ ಬಂದಾಗಿನಿಂದ ಇಲ್ಲಿಯವರೆಗೆ ಅನುದಾನದಲ್ಲಿ ಕೊಡುತ್ತಿರುವುದು ಕೇವಲ 50 ಲಕ್ಷ ರೂ.ಗಳು ಮಾತ್ರ. ಈ ಬಾರಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಅದಕ್ಕೆ 50 ಕೋಟಿ ರೂ.ಗಳನ್ನು ಘೋಷಣೆ ಮಾಡಿ ಒಂದು ಕೋಟಿ ರೂ.ಗಳನ್ನು ಪ್ರಾಯೋಗಿಕವಾಗಿ ಇಟ್ಟಿರುವುದನ್ನು ಅವರ ಗಮನಕ್ಕೆ ತಂದಿದ್ದಾರೆ. ಒಂದನ್ನು ಈ ಸದನದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕರ್ನಾಟಕ ರಾಜ್ಯದಲ್ಲಿರತಕ್ಕಂಥ 2227 ಕೊಳಚೆ ಪ್ರದೇಶಗಳಲ್ಲಿ ಕೊಳಚೆ ಮುಕ್ತ ರಾಜ್ಯವನ್ನಾಗಿ ಮಾಡುವುದಕ್ಕೆ ನಮ್ಮ ನಾಯಕರ ಸೂಚನೆ ಇದೆ. ಇವತ್ತು ರಾಜ್ಯ ಮತ್ತು ಕೇಂದ್ರ ಸರ್ಕಾರದ ಅಡಿಯಲ್ಲಿ ಬರತಕ್ಕಂಥ ಯೋಜನೆಗಳು ಏನಿವೆ, ಈ ಯೋಜನೆಗಳಲ್ಲಿ ಆಧ್ಯತೆ ಮೇಲೆ ಈ ಚಿಕ್ಕಬಳ್ಳಾಪುರ ನಗರಸಭೆಯ ಈ ಕೊಳಚೆ ನಿರ್ಮೂಲನ ಮಂಡಳಿಯಲ್ಲಿ ಆಗತಕ್ಕಂಥ ಕೆಲವು ಕಾಮಗಾರಿಗಳಿಗೆ ಆಧ್ಯತೆಯನ್ನು ಕೊಡುತ್ತೇವೆ. ಉಳಿದಿರತಕ್ಕಂಥ 20 ಏನು ಕೊಳಚೆ ಪ್ರದೇಶಗಳು ಇವೆ. ಅದನ್ನು ನಾನೇ ಸ್ವತ: ಹೋಗಿ ಅದು ಕೊಳಚೆ ನಿರ್ಮೂಲನ ಮಂಡಳಿಗೆ ಅರ್ಹತೆ ಇದೆ ಎಂದರೆ ಅದನ್ನು ಘೋಷಣೆ ಮಾಡಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಪಿ. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಅವರಿಗೆ ಬೇರೆ ಜಾಗವಿಲ್ಲ, ಅಲ್ಲಿ ಎಲ್ಲಾ ಬಡವರೆ ಇರುವುದು.

ಶ್ರೀ ವಿ. ಸೋಮಣ್ಣ: ನಾನು ಅವರ ಜೊತೆಯಲ್ಲಿಯೆ ಹೋಗಿ ನೋಡುತ್ತೇನೆ. ಯಾರದೋ ಜಾಗದಲ್ಲಿ ಕಟ್ಟಿಕೊಂಡಿದ್ದರೆ ಅದು ನನಗೆ ಕಷ್ಟವಾಗುತ್ತದೆ. ಅದನ್ನು ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ನಾನು ವಿಮರ್ಶೆ ಮಾಡುತ್ತೇನೆ.

ಅಧ್ಯಕ್ಷರು: ಎನ್.ಎ. ಹ್ಯಾರೀಸ್‌ರವರ ಪರವಾಗಿ ಅಭಯಚಂದ್ರರವರು ಪ್ರಶ್ನೆ ಕೇಳಿ.

ವಸತಿ ಮತ್ತು ನಿವೇಶನಗಳ ಯೋಜನೆಗಳು

92(885) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಗೃಹ ಮಂಡಳಿಯವರು ಅನುಷ್ಠಾನಗೊಳಿಸುತ್ತಿರುವ ವಸತಿ ಮತ್ತು ನಿವೇಶನ ಯೋಜನೆಗಳ ವಿವರಗಳೇನು;

ಆ) ಕಳೆದ 3 ವರ್ಷಗಳಲ್ಲಿ ಹಂಚಿಕೆ ಮಾಡಿದ ಮನೆ ಮತ್ತು ನಿವೇಶನಗಳ ಸಂಖ್ಯಾ ವಿವರ ನೀಡುವುದು;

ಇ) ರಾಜ್ಯದಲ್ಲಿ ಮನೆ ಮತ್ತು ನಿವೇಶನಗಳನ್ನು ಕೋರಿರುವ ಬೇಡಿಕೆಗಳ ಪ್ರಮಾಣವೇನು; ವಸತಿ ಮತ್ತು ನಿವೇಶನ ರಹಿತರ ಗುರುತಿಸುವಿಕೆಯನ್ನು ಮಂಡಳಿಯು ಕೈಗೊಂಡಿದೆಯೇ; (ವಿವರಗಳನ್ನು ನೀಡುವುದು)?

ವಿ. ಸೋಮಣ್ಣ (ವಸತಿ ಸಚಿವರು)

ಅ) ಕರ್ನಾಟಕ ಗೃಹ ಮಂಡಳಿಯು ಅನುಷ್ಠಾನಗೊಳಿಸುತ್ತಿರುವ ವಸತಿ ಮತ್ತು ನಿವೇಶನ ಯೋಜನೆಗಳ ವಿವರಗಳನ್ನು ಅನುಬಂಧ–ಅನಲ್ಲಿ ನೀಡಲಾಗಿದೆ.

ಆ) ಕಳೆದ 3 ವರ್ಷಗಳಲ್ಲಿ ಹಂಚಿಕೆ ಮಾಡಿದ ಮನೆ ಮತ್ತು ನಿವೇಶನಗಳ ಸಂಖ್ಯಾ ವಿವರಗಳನ್ನು ಅನುಬಂಧ–ಆರಲ್ಲಿ ಲಗತ್ತಿಸಿದೆ.

ಇ) ಮಂಡಳಿಯ ವತಿಯಿಂದ ರಾಜ್ಯದಲ್ಲಿ ಒಂದು ನೂರು ಸ್ಥಳಗಳಲ್ಲಿ ಬೇಡಿಕೆ ಸಮೀಕ್ಷೆ ಮಾಡಲಾಗಿದ್ದು ಇದುವರೆವಿಗೆ ಒಟ್ಟು 1,33,643 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಅದರಂತೆ, ವಸತಿ ಮತ್ತು ನಿವೇಶನಗಳಿಗಾಗಿ ಗೃಹ ಮಂಡಳಿಯು ಬೇಡಿಕೆ ಸಮೀಕ್ಷೆಯನ್ನು ಮುಂದುವರೆಸಲು ಉದ್ದೇಶಿಸಿದೆ.